ಕಳೆದ ಒಂದೇ ವರ್ಷ ಲಕ್ಸಾನು ಆಗಿರುತ್ತೆ. ಹೆಚ್ಚಿನ ಲಕ್ಸಾನು ಏನೂ ಆಗಿಲ್ಲ. ರಿಸಿಷ್ಷೆನ್ ಇದೆ. ಸಾಮಾನುಗಳಿಗೆ ಸಾಕಷ್ಟು ಬೇಡಿಕೆ ಇಲ್ಲ ಇದಕ್ಕೋಸ್ಕರ ಸೇಲ್ಸ್ ಆರ್ಗನೈಸೇಷನ್ ಚುರುಕಾಗಿ ಕೆಲಸ ಮಾಡುವಂತೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದುವರೆಗೆ ಇರತಕ್ಕಂಥ ಸ್ಯಾಕುಗಳನ್ನು ಕೊಳ್ಳತಕ್ಕ ಆರ್ಡರ್ ಬರುವ ನಿರೀಕ್ಷಣೆ ಇದೆಯೇ ! ಇದಕ್ಕೆ ಕಾರಣ ಏನು ಎಂದರೆ ಇವೊತ್ತು ರೈತರಿಗೆ ಬೇಕಾದ ಸಾಮಾನುಗಳಿಗೆ ಏನು ಒಂದು ಅರಾಯ್ ಮಿಕ್ಸ್ ಮಾಡಬೇಕೋ ಅದನ್ನು ಸರಿಯಾಗಿ ಮಾಡದೇ ಇರುವುದರಿಂದ ಇವೊತ್ತು ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ತಯಾರು ಮಾಡುವ ಸಾಮಾನುಗಳು ಉಪಯೋಗಕ್ಕೆ ಬರುವುದಿಲ್ಲ. ಆದುದರಿಂದ ರೈತರಿಗೆ ಇದರ ಬಗ್ಗೆ ನಂಬಿಕೆ ಇಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ! ಅರಾಯ್ ಮಿಕ್ಸ್ ಮಾಡುವ ಆಫೀಸರು ಸರಿಯಾಗಿ ಮಿಕ್ಸ್ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಅವರು ತಾತಾ ಮ್ಯಾನುಫ್ಯಾಕ್ಚರ್‌ರ ಜೇ ರೋಲ್ಸ್ ನಲ್ಲಿ ಇದ್ದಾರೆ ಎನ್ನುವ ವದಂತಿ ಇದೆ. ಹೀಗಿದ್ದರೆ ತಜ್ಞರಾದ ಬೇರೆ ಅಧಿಕಾರಿಗಳನ್ನು ರೀಪ್ಲೇಸ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ? ಮತ್ತು ಇದನ್ನು ಒಂದು ಸ್ಪ್ಯಾಂಡರ್ಡೈಸ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಗ್ರಾಹಕರಿಗೆ ಯಾವ ರೀತಿ ಮಾಲನ್ನು ತಯಾರು ಮಾಡಬೇಕು ಎನ್ನುವುದೇ ನಮ್ಮ ಉದ್ದೇಶವಾಗಿರಬೇಕು. ಅದು ಇಲ್ಲದಿದ್ದರೆ ಕಾರ್ಖಾನೆ ಸರಿಯಾಗಿ ನಡೆಯುವುದಿಲ್ಲ. ಇದನ್ನು ಮಾಡುವುದಕ್ಕೆ ಯಾವುದಾದರೂ ಚ್ಯುತಿ ಇದ್ದರೆ ಅದನ್ನು ನಿವಾರಣೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಒಂದು ವರ್ಷಕ್ಕಿಂತ ಹಿಂದಿನವರೆಗೆ ಹಾಸನದ ಇಂಪ್ಲಿಮೆಂಟ್ ಫ್ಯಾಕ್ಟರಿ ನಷ್ಟ ಬಂದಿದೆ. ಕಳೆದ ಸಾಲಿನಿಂದ ನಷ್ಟ ಬರುವುದಕ್ಕೆ ನೇರವಾಗಿ ಹಿಂದೆ ಫ್ಯಾಕ್ಟರಿಯಲ್ಲಿ ಯಾರು ಯಾರು ಕೊಳ್ಳಬೇಕಾಗಿತ್ತೊ, ಅವರಿಗೆ ಸಾಮಗ್ರಿಗಳನ್ನು ಮಾರಾಟ ಮಾಡುತ್ತಾ ಇರುವುದರಿಂದ ನಷ್ಟ ಬರುತ್ತಿತ್ತು. ಈಗ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಎಂದು ಮಾಡಿ ಅವರು ಸುಮಾರು 4 ಪರ್ಸೆಂಟು ಕಮೀಷನ್ ಕೊಡಬೇಕು ಎಂದು ಕೇಳುತ್ತಾ ಇರುವುದರಿಂದ, ಉತ್ತರ ಹಿಂದೂಸ್ಥಾನದ ಗ್ರಾಹಕರು ಇದಕ್ಕೆ ವಿರುದ್ಧವಾಗಿ ನಮ್ಮ ಫ್ಯಾಕ್ಟರಿ ಸಾಮಾನು ತೆಗೆದುಕೊಳ್ಳುವುದಿಲ್ಲ ಎಂದು ಸ್ಟೈಕ್ ರೀತಿಯಲ್ಲಿ ವರ್ತಿಸಿದ್ದರಿಂದ ನಷ್ಟವಾಗಿದೆ. ಈ ಕಾರ್ಖಾನೆ ಉತ್ಪಾದನೆ ಮಾಡತಕ್ಕ ಸಾಮಾಗ್ರಿಗಳ ಮಟ್ಟದಿಂದ ಅಲ್ಲ ಎಂದು ಗೊತ್ತಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಕಳೆದ ವರ್ಷ ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ತಯಾರು ಮಾಡಿದ ವಸ್ತುಗಳ ಮಾರಾಟದ ವ್ಯವಸ್ಥೆ ಬೇರೆ ಮಾಡಿರುವುದರಿಂದ ಮಾರಾಟ ಸಾಕಷ್ಟು ಆಗಿಲ್ಲ ಎಂದು ಹೇಳಿದರು. ಮಾರಾಟದ ವ್ಯವಸ್ಥೆ ಬೇರೆ ಮಾಡಿದ್ದು ನಿಜ. ಇಲ್ಲಿಯವರೆಗೆ ಕಾರ್ಖಾನೆಯವರು ತಮ್ಮದೇ ಆದಂಥ ಡೀಲರ್ಸ್ ಕೊಟ್ಟು ಮಾರಾಟ ಮಾಡುತ್ತಾ ಇದ್ದರು. ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಎಂದು ಹೇಳತಕ್ಕಂಥ ಒಂದು ಸರ್ಕಾರಿ ಸಂಸ್ಥೆಯನ್ನು ಮಾಡಿದ್ದೇವೆ. ಸರ್ಕಾರಿ ಸಂಸ್ಥೆಗಳಲ್ಲಿ ಉತ್ಪಾದನೆ ಮಾಡಿದಂಥ ಎಲ್ಲಾ ಸಾಮಗ್ರಿಗಳನ್ನೂ ಈ ಸಂಸ್ಥೆಗಳ ಮುಖಾಂತರವಾಗಿ ಮಾರಾಟ ಮಾಡಬೇಕು ಎನ್ನುವ ತೀರ್ಮಾನ ತೆಗೆದುಕೊಂಡಿದ್ದೇವೆ. ಇದರಿಂದ ಸ್ವಲ್ಪಮಟ್ಟಿಗೆ ತೊಂದರೆ ಆಗಿರಬಹುದು. ಬರುವ ವರ್ಷ ಇದರಿಂದ ಹೆಚ್ಚಿನ ಪ್ರಯೋಜನ ಆಗುತ್ತದೆ ಎನ್ನುವ ಆಸೆ ನನಗಿದೆ.

Construction of a Tank at Babi Village

467. Sri N. A. CHANNE GOWDA (Pandavapura).—

Will the Minister for Public Works be pleased to state :—

(*a*) whether there is any proposal to construct a tank at Babi village in Pandavapura Taluk ;

(*b*) whether an estimate has been prepared ;

(*c*) the estimated cost and estimated atchkat under the above tank ;

(*d*) when the work will be taken up ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.
(*b*) Yes.
(*c*) Estimated cost Rs. 4.77 lakhs. Atchkat likely to be irrigated 900 Acres.
(*d*) After the estimate is sanctioned and funds provided therefor in the budget estimates.

2-00 P.M.

ಶ್ರೀ ಎನ್. ಎ. ಚನ್ನೇಗೌಡ.—ಈ ಅಂದಾಜನ್ನು ಎಂದು ಮಾಡಲಾಯಿತು ? ಅದಕ್ಕೆ ಏಕೆ ಮಂಜೂರಾತಿ ಬಂದಿಲ್ಲ ?

†ಶ್ರೀ ಆಲೂರು ಹನುಮಂತಪ್ಪ.—ಅಂದಾಜು ತಯಾರು ಮಾಡಿ ಈಗಾಗಲೇ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುವುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—1947ರಿಂದ ಎಷ್ಟು ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾಡಿಸಿದ್ದೀರಿ ? ಮತ್ತು ಎಷ್ಟು ಕೆರೆಗಳನ್ನು ಕಟ್ಟಿಸಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ವಿವರವಾಗಿ ಉತ್ತರ ಕೊಡುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ.—ನಮ್ಮಲ್ಲಿ ಒಂದು ಸಣ್ಣ ನೀರಾವರಿ ಕೆಲಸವನ್ನೂ ಮಾಡಿಸಲಿಲ್ಲ, ಒಂದು ಕೆರೆಯನ್ನೂ ಕಟ್ಟಿಸಲಿಲ್ಲ. ಮಾನ್ಯ ಸಚಿವರಿಗೂ ಅದು ಗೊತ್ತಿದೆ. ಅವರು ಇದರಲ್ಲಿ ಮುಲ ತಾಯಿ ಮನೋಭಾವನೆಯನ್ನು ಬಿಟ್ಟು ಈ ವರ್ಷವೇ ಆ ಕಾಮಗಾರಿಯನ್ನು ಮಾಡಿಸಿ ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಅಲ್ಲಿ 15 ಕೆಲಸಗಳು ನಡೆಯುತ್ತಾ ಇವೆ. ಈ ಕೆಲಸ ಆಗಬೇಕೆಂದು ಮಾನ್ಯ ಸದಸ್ಯರು ಒತ್ತಾಯ ಮಾಡಿದ್ದರಿಂದ ಅದರ ಬಗ್ಗೆ ಅಂದಾಜು ಸಿದ್ಧವಾಗುತ್ತಿದೆ. ಅದು ಸರ್ಕಾರಕ್ಕೆ ಬಂದನಂತರ ಯೋಚನೆ ಮಾಡಲಾಗುತ್ತದೆ.

Complaints against the Inspector of Schools, Belur

468. Sri S. H. PUTTARANGANATH (Belur).—

Will the Minister for Agriculture and Education be pleased to state :—

(*a*) whether many complaints have been received against the Inspector of Schools, Belur ;
(*b*) if so, what is the nature of complaints and the reasons for not taking any action against the officials so far by the concerned authorities;
(*c*) the number of years required to complete the enquiry standing against the Official ?

A.—Sri K. V. SHANKARA GOWDA (Minister for Agriculture and Education).—

(*a*) Some Complaints were received by the Director of Public Instruction and by the Vigilance Commission.